





(6ನೇ ಪುಟದಿಂದ)

ಬಹಳಷ್ಟು ಪ್ರಾಣಿ– ಪಕ್ಷಿಗಳಲ್ಲಿ ಮರಿಗಳ ಹೊಣೆ ಹೆಣ್ಣಿನದೇ, ಆದರೆ ಹೆಣ್ಣು–ಗಂಡು ಮಕ್ಕಳನ್ನು ಪೋಷಿಸುವ ಪರಿಪಾಠ ಇಲ್ಲವೇ ಇಲ್ಲವೆನ್ನುವಂತಿಲ್ಲ. ಸಿಂಹ ಮರಿಗಳು ಹುಟ್ಟಿದ ನಾಲ್ಕೈದು ತಿಂಗಳು ತಾಯಿ ಜತೆಯಲ್ಲಿದ್ದರೆ ಆನೆ ಮರಿಗಳು ಎರಡರಿಂದ ಎರಡೂವರೆ ವರ್ಷ ತಾಯಿಯನ್ನು ಬಿಟ್ಟಿರುವುದಿಲ್ಲ.

ಸಿಕ್ಕಿಂ ಅರಣ್ಯದಲ್ಲಿ ಕಾಣಬಹುದಾದ ನಯನ್ (ನಮ್ಮ ಕುರಿಗಿಂತ ತುಸು ದೊಡ್ಡದು) ಗಂಡು–ಹೆಣ್ಣು ಹೆರುವವರೆಗೆ ಒಟ್ಟಾಗಿದ್ದು ನಂತರ ಬೇರಾಗುತ್ತವೆ. ಮತ್ತೆ ಅವು ಒಟ್ಟಾಗುವುದು ಮರಿ ತಾಯಿಯನ್ನು ಬಿಟ್ಟು ಹೋದ ಮೇಲೆ.

ನೀಲಗಿರಿಯ ಲಂಗೂರ್ ಮರಿಗಳಿಗೆ ತಾಯಿ ಏಳೆಂಟು ತಿಂಗಳು ಹಾಲುಣಿಸಿದರೆ ಮುಂದಿನ ದಿನದಲ್ಲಿ ಅವು ತಿಂದು ಬದುಕುವುದು ಎಲೆಗಳನ್ನು. ಬಂಗಾರದ ಲಂಗೂರ್ ಯಾವಾಗಲೂ ಮಗುವನ್ನು ಕಂಕುಳಲ್ಲಿ ಇಟ್ಟುಕೊಂಡೇ ಇರುತ್ತದೆ.

**ಹುಟ್ಟಿದಾಗ ಅಂಗ ವೈಕಲ್ಯ!**

ತೋಳಗಳು ಒಮ್ಮೆಗೆ 6 ರಿಂದ 10 ಮರಿಗಳಿಗೆ ಜನ್ಮ ನೀಡುತ್ತವೆ. ಅಚ್ಚರಿ ಎಂದರೆ ಅವು ಹುಟ್ಟಿದಾಗ ಅವೆಲ್ಲವೂ ಕಿವುಡು ಹಾಗೂ ಕುರುಡು. ಕೆಲವು ದಿನಗಳ ಬಳಿಕವಷ್ಟೆ ಅವು ಸಹಜವಾಗುವುದು. ಚಿಕ್ಕಂದಿನಲ್ಲಿ ಆ ಮರಿಗಳ ತಾಯಿ ತಿಂದು ಕಕ್ಕಿದ ಮಾಂಸದ ತುಂಡುಗಳನ್ನು ತಿಂದು ಮರಿಗಳು ಬದುಕುತ್ತವೆ.

ಚಿಪ್ಪು ಹಂದಿಮರಿಗಳು ಬಲಿಷ್ಟವಾಗುವವರೆಗೆ ತಾಯಿ ಬಾಲದ ಮೇಲೆ ಸವಾರಿ ಮಾಡಿದರೆ ಕಾಡು ಕತ್ತೆಮರಿ ಜನ್ಮ ಪಡೆದ ಕೆಲವೇ ಗಂಟೆಗಳಲ್ಲಿ ತಾನೇ ಅಡ್ಡಾಡಲಾರಂಭಿಸುತ್ತದೆ.

**ಕರಡಿ ಅಪಾಯಕಾರಿ**

ತಾಯಿ–ಮರಿ ಜೊತೆಗಿದ್ದಾಗ ಗಂಡು ಕರಡಿ ಬಹಳ ಅಪಾಯಕಾರಿ. ಸ್ವಲ್ಪ ಎಚ್ಚರ ತಪ್ಪಿದರೂ ಪಂಜುಗಳಿಂದ ಕರಡಿ ದಾಳಿಗಿಳಿಯುವುದು ಖಚಿತ. ಮಹಿಳಾ ಪ್ರಧಾನವಾದ ಕಾಡೆಮ್ಮೆ ಪ್ರಪಂಚದಲ್ಲಿ, ತಾಯಿ ಮಗುವಿನ ರಕ್ಷಣೆಗೆ ಟೊಂಕ ಕಟ್ಟಿ ನಿಲ್ಲುತ್ತಾಳೆ.

ಹಕ್ಕಿ ಪ್ರಪಂಚದಲ್ಲಿ ತಾಯಿ ಮಕ್ಕಳಿಗೆ ತೋರುವ ಪ್ರೀತಿ, ವಾತ್ಸಲ್ಯ ವರ್ಣಿಸಲು ಪದಗಳೇ ಇಲ್ಲ. ಮೊಟ್ಟೆ ಇಟ್ಟು ಕಾವು ಕೊಟ್ಟು ಕಣ್ತೆರೆಯುವ ಪುಟ್ಟ ಪುಟ್ಟ ಹಕ್ಕಿಗಳ ಹಸಿವು ನೀಗಿಸಲು ತಾಯಿ ಹಕ್ಕಿ ಪಡಿಪಾಟಲು ಹೇಳತೀರದು.

ಜನ್ಮ ಕೊಟ್ಟ ಮಗು–ಮರಿಗಳನ್ನು ಕಣ್ಣ ರೆಪ್ಪೆಯಲ್ಲಿಟ್ಟುಕೊಳ್ಳುವ ಮಾತೆಯ ಮಮತೆಗೆ ಕೊನೆಯುಂಟೆ?